■ ಹನಿ

## ಪೋರ್ಚುಗಲ್‌ಗೆ ಛೆಟ್ರಿ



ಭಾರತದ ಫುಟ್‌ಬಾಲ್ ಪ್ರಿಯರಿಗೆ ರೋಮಾಂಚನ ಹುಟ್ಟಿಸುವ ಸುದ್ದಿ ಇಲ್ಲಿದೆ. ಭಾರತ ತಂಡದ ಸ್ಟಾರ್ ಆಟಗಾರ ಸುನಿಲ್ ಛೆಟ್ರಿ ಇದೀಗ ಪೋರ್ಚುಗಲ್‌ನ ಖ್ಯಾತ ಫುಟ್‌ಬಾಲ್ ಕ್ಲಬ್ ಸ್ಪೋರ್ಟಿಂಗ್ ಲಿಸ್ಬನ್ ತಂಡದಲ್ಲಿ ಆಡಲು ಎರಡು ವರ್ಷಗಳ ಒಪ್ಪಂದಕ್ಕೆ ಸಹಿ ಹಾಕಿದ್ದಾನೆ. ಒಂದು ಕಾಲದಲ್ಲಿ ಪೋರ್ಚಗಲ್ ರಾಷ್ಟ್ರೀಯ ತಂಡದ ನಾಯಕ ಕ್ರಿಶ್ಚಿಯನ್ ರೊನಾಲ್ಡೊ ಕೂಡಾ ಇದೇ ತಂಡದಲ್ಲಿ ಆಡುತ್ತಿದ್ದ. ಸದ್ಯಕ್ಕೆ ಪೋರ್ಚುಗಲ್ ಫುಟ್‌ಬಾಲ್ ತಂಡದಲ್ಲಿ ಆಡುತ್ತಿರುವ ಹಲವು ಆಟಗಾರರು ಈ ಕ್ಲಬ್‌ನಲ್ಲಿದ್ದಾರೆ. ಸುನಿಲ್ ಛೆಟ್ರಿಗೆ ಸಿಕ್ಕಿರುವುದು ನಿಜಕ್ಕೂ ಬಹುದೊಡ್ಡ ಅವಕಾಶ. ಸದ್ಯಕ್ಕೆ ಕ್ಲಬ್‌ನ ಬಿ ತಂಡಕ್ಕೆಂದು ಛೆಟ್ರಿಯನ್ನು ಕರೆಸಿದ್ದರೂ, ಅಲ್ಲಿನ ಸಾಧನೆ ನೋಡಿ ಎ ತಂಡಕ್ಕೂ ಆಯ್ಕೆ ಮಾಡುವ ಸಾಧ್ಯತೆ ಇದೆ. ಬಹುಶಃ ಭಾರತದ ಬೈಚುಂಗ್ ಭುಟಿಯಾ ಬಳಿಕ ವಿಶ್ವಮಟ್ಟದ ಕ್ಲಬ್‌ಗೆ ಆಡುವ ದೊಡ್ಡ ಅವಕಾಶ ಸಣ್ಣ ವಯಸ್ಸಿನಲ್ಲೇ ಸಿಕ್ಕಿರುವುದು ಈತನೊಬ್ಬನಿಗೇ. ವಿಶ್ವ ಫುಟ್‌ಬಾಲ್ ರ‍್ಯಾಂಕಿಂಗ್‌ನಲ್ಲಿ 163ನೇ ಸ್ಥಾನದಲ್ಲಿರುವ ಭಾರತ ತಂಡದ ಆಟಗಾರನೊಬ್ಬ, ವಿಶ್ವದ ಐದನೇ ರ‍್ಯಾಂಕ್‌ನ ತಂಡವಾಗಿರುವ ಪೋರ್ಚುಗಲ್‌ನ ಕ್ಲಬ್‌ನಲ್ಲಿ ಆಡುವುದೆಂದರೆ ಸಣ್ಣ ಸಾಧನೆಯೇನಲ್ಲ.

28ರ ಹರೆಯದ ಸುನಿಲ್ (ಬರ್ತ್‌ಡೇ 3-8-84) ಡಾರ್ಜಿಲಿಂಗ್‌ನ ನೇಪಾಳಿ ಮೂಲದ ಭಾರತೀಯ. ಜೆಸಿಟಿ ತಂಡದಲ್ಲಿ ಮೂರು ಸೀಸನ್‌ನಲ್ಲಿ ಆಡಿ 20 ಗೋಲುಗಳನ್ನು ಹೊಡೆದದ್ದು ಈತನ ಸದ್ಯದ ಸಾಧನೆ. ಅದರಲ್ಲೂ ಒಂದೇ ಸೀಸನ್‌ನಲ್ಲಿ 12 ಗೋಲು ಹೊಡೆದಿರುವ ಸುನಿಲ್, 2008ರ ಏಷ್ಯನ್ ಫೆಡರೇಶನ್ ಕಪ್ ಫೈನಲ್‌ನಲ್ಲಿ ಹ್ಯಾಟ್ರಿಕ್ ಹೊಡೆದು ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾದ. 2007ರಲ್ಲಿ ಈತ ಎಐಎಫ್‌ಎಫ್‌ನ ವರ್ಷದ ಆಟಗಾರ ಪ್ರಶಸ್ತಿಯನ್ನೂ ಗೆದ್ದುಕೊಂಡಿದ್ದ.

ಕೋಲ್ಕತ್ತಾದಲ್ಲಿ ಮೋಹನ್ ಬಾಗನ್ ಪರ ಆಟ ಆರಂಭಿಸಿದ ಛೆಟ್ರಿ ಆ ಬಳಿಕ ಈಸ್ಟ್ ಬೆಂಗಾಲ್ ಕ್ಲಬ್ ಮತ್ತು ಡೆಂಪೋ ಪರವಾಗಿಯೂ ಆಡಿದ್ದಾನೆ. ಈಗಿನದು ಅಂತರರಾಷ್ಟ್ರೀಯ ಜಿಗಿತ. 'ಅಲ್ಲಿ ಆಟ ಸುಲಭವಿಲ್ಲ. ತುಂಬ ಶ್ರಮ ಪಡಬೇಕಿದೆ. ಅದಕ್ಕೆ ನಾನು ತಯಾರಿದ್ದೇನೆ' ಎಂದು ಛೆಟ್ರಿ ಪ್ರತಿಕ್ರಿಯೆ ನೀಡಿರುವುದು ಆತನ ಹುಮ್ಮಸ್ಸಿಗೆ ತಕ್ಕಂತೆಯೇ ಇದೆ. ಈ ಹಿಂದೆ 2009ರಲ್ಲಿ ಇಂಗ್ಲೆಂಡಿನ ಕ್ವೀನ್ಸ್ ಪಾರ್ಕ್ ರೇಂಜರ್ಸ್ ಕ್ಲಬ್‌ಗೆ ಆಯ್ಕೆಯಾಗಿದ್ದ ಈತನಿಗೆ ಆಗ ಅಲ್ಲಿ ವರ್ಕ್ ಪರ್ಮಿಟ್ ಸಿಕ್ಕಿರಲಿಲ್ಲ. ಆ ಬಳಿಕ ಇಂಗ್ಲಿಷ್ ಕ್ಲಬ್ ಕಾವೆಂಟ್ರಿಸಿಟಿ ಪರವಾಗಿ ಆಡಿದರೂ ಹೆಚ್ಚಿನ ವೃತ್ತಿಪರ ಲಾಭವಾಗಲಿಲ್ಲ. ಆದರೆ ಪೋರ್ಚುಗಲ್‌ನಲ್ಲಿ ವಿಶ್ವಖ್ಯಾತ ಆಟಗಾರರ ಜತೆಗೆ ಆಡುವಾಗ ಸಿಗುವ ಅನುಭವದ ಲಾಭವೇ ಬೇರೆ. ಭಾರತ ತಂಡದ ಪರ 58 ಪಂದ್ಯಗಳಲ್ಲಿ 33 ಗೋಲು ಹೊಡೆದಿರುವ ಛೆಟ್ರಿ, ಚೆಂಡಿನ ಮೇಲೆ ನಿಯಂತ್ರಣ ಸಾಧಿಸುವ ಕಲೆ ಮತ್ತು ಬಿರುಸಾದ ಶೂಟಿಂಗ್‌ಗೆ ಹೆಸರುವಾಸಿ. ವಿಶ್ವಮಟ್ಟದಲ್ಲಿ ಹೆಸರು ಗಳಿಸಿ, ಭಾರತಕ್ಕೂ ಕೀರ್ತಿ ತರಲಿ.

## ಕೋಟ್ಯಾಧೀಶೆಯ ಸಂಕೋಚ

ವಿಶ್ವದ 21 ಮಂದಿ ಭಾರೀ ಕೋಟ್ಯಾಧೀಶೆಯರ ಪಟ್ಟಿಯೊಂದು ಪ್ರಕಟವಾಗಿದೆ. ಅದರಲ್ಲಿ 17ನೇ ಸ್ಥಾನದಲ್ಲಿರುವಾಕೆ ಹಾಂಕಾಂಗ್‌ನ ವುಯಾಜುನ್. ಈಕೆಯ ಒಟ್ಟು ಆಸ್ತಿಯ ಮೊತ್ತ 5.7 ಶತಕೋಟಿ ಡಾಲರ್! ವಿಶೇಷ ಏನೆಂದರೆ, ಈಕೆಗಿಂತ ಮುಂಚಿನ 16 ಸ್ಥಾನಗಳಲ್ಲಿ ಇರುವ ಕೋಟ್ಯಾಧೀಶೆಯರದ್ದು ಕುಟುಂಬದಿಂದ ಬಂದ ಬಳುವಳಿಯ ಆಸ್ತಿ. ಆದರೆ ಈಕೆಯದ್ದು ಸ್ವಯಾರ್ಜಿತ. ಸಾಮಾನ್ಯ ಕುಟುಂಬವೊಂದರಲ್ಲಿ ಹುಟ್ಟಿದ ಈಕೆ 1995ರಲ್ಲಿ ಸ್ವಂತ ರಿಯಲ್ ಎಸ್ಟೇಟ್ ಕಂಪೆನಿಯನ್ನು ಹುಟ್ಟು ಹಾಕಿದ ಬಳಿಕ ಶ್ರೀಮಂತಿಕೆಯಲ್ಲಿ ಬೆಳೆದ ರೀತಿ ಎಲ್ಲರಲ್ಲೂ ಬೆರಗು ಹುಟ್ಟಿಸಿದೆ. ಕಳೆದ 16 ವರ್ಷಗಳಲ್ಲಿ ಈಕೆ ಎಷ್ಟು ಎತ್ತರಕ್ಕೆ ಬೆಳೆದಿದ್ದಾಳೆಂದರೆ ಈಕೆ ಈಗ (ಕಂಪೆನಿಯಲ್ಲಿ ಗಂಡನ ಪಾಲೂ ಇದೆ.) ಚೀನಾದ ನಂಬರ್ ಒನ್ ಶ್ರೀಮಂತೆ.

1984ರಲ್ಲಿ ಎಂಜಿನಿಯರಿಂಗ್ ಡಿಗ್ರಿ ಮುಗಿಸಿದ ವು ಯಾಜುನ್ ಕೆಲಸಕ್ಕೆ ಸೇರಿದ್ದು ಪತ್ರಕರ್ತೆಯಾಗಿ! 'ಚೀನಾ ಸಿಟಿ ಸ್ಟೈಟ್ ಸೀಯಿಂಗ್' ಎನ್ನುವ ಪತ್ರಿಕೆಯಲ್ಲಿ ವರದಿಗಾರ್ತಿಯಾಗಿ ಸೇರಿ ಸಂಪಾದಕಿ ಆಗುವಷ್ಟು(1988ರಿಂದ 93ರವರೆಗೆ) ಅನುಭವ ಆಯಿತು. ಈ ಪತ್ರಿಕೆ ನಡೆಸುತ್ತಿದ್ದ ಕಂಪೆನಿಗೆ ನಿರ್ಮಾಣ ಉದ್ಯಮದ ಶಾಖೆಯೂ ಇತ್ತು. ಪತ್ರಿಕೆಯಿಂದ ನಿರ್ಮಾಣ ಉದ್ಯಮದ ವಿಭಾಗಕ್ಕೆ ವರ್ಗಾವಣೆಯಾದ ಈಕೆ ಅಲ್ಲಿ, ಸರಕಾರದ ಏಜೆನ್ಸಿಗಳ ಜತೆ ಕಂಪೆನಿಯ ಪರವಾಗಿ ವ್ಯವಹರಿಸುವ ಜವಾಬ್ದಾರಿ ಹೊತ್ತುಕೊಂಡಳು. ಅನುಭವ ಹೆಚ್ಚಿದಂತೆಯೇ 1995ರಲ್ಲಿ ತನ್ನದೇ ಆದ ಹೊಸ ರಿಯಲ್ ಎಸ್ಟೇಟ್ ಕಂಪೆನಿ ಹುಟ್ಟುಹಾಕಿದಳು. ಇವತ್ತು 67 ದೇಶಗಳಲ್ಲಿ ಈಕೆಯ ಒಡೆತನದ 1032 ಕಂಪೆನಿಗಳಿವೆ. ಲಾಂಗ್ ಫೋರ್ ಪ್ರಾಪರ್ಟೀಸ್ ಎಂದರೆ ಚೀನಾ ಮಾತ್ರವಲ್ಲ, ವಿಶ್ವದ ಖ್ಯಾತ ಕಂಪೆನಿ ಎಂಬ ಹೆಸರು ಬಂದಿದೆ.



ಇಷ್ಟೊಂದು ದೊಡ್ಡ ಶ್ರೀಮಂತೆಯಾಗಿದ್ದರೂ ಈಕೆಯ ವೈಯಕ್ತಿಕ ವಿವರಗಳು ಚೀನಾದಲ್ಲೇ ಬಹುತೇಕರಿಗೆ ಗೊತ್ತಿಲ್ಲ. ಅದಕ್ಕೆ ಕಾರಣ ಈಕೆಯ ಸಂಕೋಚ ಪ್ರವೃತ್ತಿ. ಈಕೆ ತನಗೆ ತಾನೇ ಮೂರು ನಿರ್ಬಂಧಗಳನ್ನು ಹಾಕಿಕೊಂಡಿದ್ದಾಳೆ. ಟೀವಿಯಲ್ಲಿ ಕಾಣಿಸಿಕೊಳ್ಳುವುದಿಲ್ಲ; ಪತ್ರಿಕೆಗಳಿಗೆ ಸಂದರ್ಶನ ನೀಡುವುದಿಲ್ಲ ಮತ್ತು ಆಟೋಗ್ರಾಫ್ ನೀಡುವುದಿಲ್ಲ ಎನ್ನುವುದೇ ಈ ನಿರ್ಬಂಧಗಳು! ಕೆಲವು ವರ್ಷಗಳ ಹಿಂದೆ ಈಕೆಯ ಅಗಾಧ ಶ್ರೀಮಂತಿಕೆಯ ಬಗ್ಗೆ 'ಹುರುನ್ ರಿಪೋರ್ಟ್' ಎಂಬ ಮ್ಯಾಗಸಿನ್ ವರದಿ ಮಾಡಿದಾಗ, ಈಕೆಯನ್ನು ಗಂಡಸು ಎಂದೇ ತಿಳಿದುಕೊಂಡಿತ್ತು! ಅಷ್ಟರ ಮಟ್ಟಿಗೆ ಈಕೆಯ ವಿವರಗಳು ಲಭ್ಯವಿಲ್ಲ. ನೆಟ್‌ನಲ್ಲಿ ಹುಡುಕಿದರೆ ಒಂದು ಒಳ್ಳೆಯ ಫೋಟೋ ಕೂಡಾ ಸಿಗುವುದಿಲ್ಲ. ಇಲ್ಲಿರುವ ಫೋಟೋ ಕೂಡಾ ಏಳೆಂಟು ವರ್ಷ ಹಳೆಯದ್ದು!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65